**MVC 668-24 RW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 19.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ ಎಂ ವೈ ಎ, ವಕೀಲರಿಂದಃ**

ದಾಖಲೆಗಳ ಆಧಾರದ ಮೇಲೆ ಕೇಸಿನ ಮಾಹಿತಿ ಇದೆ. ಅಪಘಾತ ದಲ್ಲಿ ಮಂಜುನಾಥ ಮರಣ ಹೊಂದಿದ್ದಾನೆ ಅಂದರೆ ಸರಿ. ಅಪಘಾತ ದ ಕಾಲಕ್ಕೆ ವಿಮೆ ಚಾಲ್ತಿಯಲ್ಲಿದೆ ಅಂದರೆ ಸರಿ. ಅಪಘಾತ ವಾದ ನಂತರ ಪೋಲಿಸರು ತನಿಖೆ ಮಾಡಿ ಅಂತಿಮ ವರದಿ ಸಲ್ಲಿಸಿದ್ದಾರೆ ಅಂದರೆ ಸರಿ. ನಮ್ಮ ವಾಹನದ ಮಾಲಿಕ ಕುಮಾರಸ್ವಾಮಿ. ಚಾಲಕನ ಹೆಸರು ಬಸವರಾಜ. ಬಸವರಾಜನಿಗೆ ಡಿ ಎಲ್ ಇದೆ ಅಂದರೆ ಸರಿ. 1 ನೇ ಆರೋಪಿ ಬಸವರಾಜ ಅಂದರೆ ಸರಿ. 1 ನೇ ಆರೋಪಿ ವಾಹನವನ್ನು ಅತಿ ವೇಗ ವ ನಿರ್ಲಕ್ಷ್ಯತನದಿಂದ ಚಾಲನೆ ಮಾಡಿ ಅಪಘಾತ ಪಡಿಸಿದ್ದಾನೆಂದು ಆಪಾದಿಸಲಾಗಿದೆ ಅಂದರೆ ಸರಿ. ಇಬ್ಬರ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳುತ್ತಾರೆ. ನಮಗೆ ಅನುಕೂಲವಾಗಲು ಮುಖ್ಯ ವಿಚಾರಣೆ ಪ್ಯಾರಾ ನಂಃ 2 ನ್ನು ಬರೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಬೈಕ ಸವಾರನ ಮೇಲೆ ಅತಿ ವೇಗ ವ ನಿರ್ಲಕ್ಷ್ಯತನದಿಂದ ಅಪಘಾತ ವಾಗಿದೆ ಎಂದು ಹೇಳಿಲ್ಲ ಅಂದರೆ ಸರಿ. ಅದು ಸುಳ್ಳು ಇದೆ ಎಂದು ಹೇಳುತ್ತಾರೆ. ನಾವು ಅಂತಿಮ ವರದಿ ಪ್ರಶ್ನೆ ಮಾಡಿಲ್ಲ. ಕೆಎ-26 ಬಿ /6593 ವಾಹನದ ನೋಂದಣಿಯಾಗಿದೆ ಅಂದರೆ ಸರಿ. ವಾಹನದ ನೋಂದಣಿ, ವಿಮಾ ಪಾಲಿಸಿ ಹಾಗೂ ಡಿ ಎಲ್ ಚಾಲ್ತಿಯಲ್ಲಿದೆ ಅಂದರೆ ಸರಿ. ನಮ್ಮ ವಾಹನದ ತಪ್ಪಿನಿಂದ ಅಪಘಾತ ವಾಗಿದ್ದ ಪರಿಹಾರ ಕೊಡಲು ನಾವು ಬಾಧ್ಯಸ್ಥರು ಅಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಬಾರದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.